"ಆದ್ರೆ ಹೊರಡೋದಂತೂ ನಿಜ ತಾನೇ?"

"..."

"ಆಶ್ಚರ್ಯ ಆಗುತ್ತೆ ನಂಗೆ..."

ರಾಜೀವ ಕೌತುಕದಿಂದ ಅಮ್ಮನ ಮುಖ ನೋಡಿದ. ಆಶ್ಚರ್ಯಪಡುವಂತಾ ವಿಷಯ ಏನಿದೆ?

"ಏನ್ಹೇಳ್ತಿದ್ದಿ ಅಮ್ಮಾ?" ಕೇಳಿದ.

"ಅಲ್ರೋ, ನೀನೂ ನಮ್ಜೊತೆ ಬರ್ತೀಯಾ ಅಂತ ಒಂದು ಮಾತು ಕೇಳುವಷ್ಟು ಸೌಜನ್ಯ ನಿಮಗೆ ಬರ್ಲಿಲ್ಲ. ನನ್ನ ಕಂದ್ರೆ ಎಷ್ಟು ಪ್ರೀತಿ ಅಂತ ಈಗ ಗೊತ್ತಾಗ್ತಿದೆ ನಂಗೆ..." ನಿಜಕ್ಕೂ ಸುವರ್ಣನ ಗಂಟಲು ಗದ್ಗದವಾಯಿತಾ ಅಥವಾ ತಮ್ಮಿಬ್ಬರಿಗೆ ಹಾಗೆನಿಸಿತಾ?

"ನಿಮಗೆ ಯಾವಾಗ ಬರ್ಬೇಕು ಅನ್ಸಿದ್ರೂ ಬಂದ್ಬಿಡಿ ಅಮ್ಮಾ, ನಾವು ಕರೆಯೋಕೇನುಂಟು? ಅದೂ ನಿಮ್ಮನೇನೇ ಅಲ್ವಾ?" ಹೇಳಿದ್ದು ಕಸ್ತೂರಿ.

"ಯಾಕೆ? ನನ್ನನ್ನ ಜೊತೆಗೆ ಇಟ್ಕೋಬಾರ್ದು ಅಂತಾನಾ?"

"ನಾವಿಬ್ರೂ ಹೊರಗಡೆ ಹೋದ್ರೆ ಒಬ್ಳೇ ಮನೇಲಿ ಹೇಗಿರ್ತಿ ಅಮ್ಮಾ? ಬೇಜಾರಾಗಲ್ವಾ?"

"ಟೀವಿ ಇರುತ್ತಲ್ಲ?"

"ತಮಾಷೆ ಮಾಡ್ತಿದ್ದಿ ನೀನು. ಯಾವತ್ತೂ ಈ ಊರು, ಈ ಮನೆ ಬಿಟ್ಟು ಇದ್ದೋಳಲ್ಲ..." ರಾಜೀವ ಹೇಳಿದ.

"ನನ್ನ ಕರ್ಕೊಂಡ್ಹೋಗೋಕೆ ಮನಸ್ಸಿಲ್ಲ ಅನ್ನು."

"ಇಷ್ಟೇನಾ ನೀನು ನನ್ನನ್ನು ಅರ್ಥ ಮಾಡ್ಕೊಂಡಿರೋದು? ನೀನು ಜೊತೇಲಿರ್ತೀನಿ ಅಂದ್ರೆ ಬೇಡ ಅಂತೀನಾ ನಾನು? ಒಬ್ಬಳೇ ಇದ್ದು ಅಭ್ಯಾಸವೇ ಇಲ್ಲ ಅಂತ..."

"ರಜಾ ಗಿಜಾ ಅಂತ ಇರುತ್ತಲ್ವಾ? ಮದುವೆ ಆಗಿ ಎರಡು ವರ್ಷ ಆಯ್ತು. ನೀವು ಮನಸ್ಸು ಮಾಡಿದ್ರೆ ಮೂರನೆಯೋರು ಮನೆಗೆ ಬರ್ತಾರೆ..."

ರಾಜೀವ ಬೆರಗಿನಿಂದ ಅಮ್ಮನ ಮುಖ ನೋಡಿದರೆ ಕಸ್ತೂರಿಯ ಮುಖ ಬೆಳಗಿತು. ದುಡಿಮೆಯಿಂದ ದಣಿದು ಮನೆಗೆ ಬರುವಾಗ ಆತ್ಮೀಯವಾಗಿ ಕಾಯುತ್ತಿರುವ ಒಂದು ಜೀವ ಮನೆಯಲ್ಲಿದ್ದರೆ ಅದರ ಸುಖವೇ ಬೇರೆ ಎನ್ನುವ ಅರಿವಿನಿಂದಲೋ, 'ಕೊನೆಗೂ ಅತ್ತೆ ತನ್ನನ್ನು ಒಪ್ಪಿಕೊಂಡರು' ಎನ್ನುವ ಹಿತದಿಂದಲೋ, ಅಥವಾ ಅತ್ತೆ ಪ್ರಸ್ತಾಪಿಸಿದ ಮೂರನೆಯವರ ಕುರಿತಾದ ನಿರೀಕ್ಷೆಯಿಂದಲೋ, ಏನೋ ಒಂದು. ಅತ್ತೆಗೆ ಜೊತೆಯಾಗಿರಲು ಒಂದು ಜನ ಇಟ್ಟುಕೊಳ್ಳುವುದು ಕಷ್ಟದ ಮಾತೇನಲ್ಲ. ಮಡದಿಯ ಮುಖ ನೋಡಿಯೇ ಅವಳ ಮನೋಸ್ಥಿತಿಯನ್ನು ಅರ್ಥ ಮಾಡಿಕೊಂಡ ರಾಜೀವ ಸಂಭ್ರಮದಿಂದ ಹೇಳಿದ,

"ನಾನು ಹೋಗೋವಾಗ ಒಟ್ಟಿಗೆ ಹೋಗೋಣ ಅಮ್ಮಾ, ಅಷ್ಟರಲ್ಲಿ ನಿನ್ನ ಸೊಸೆ ಮನೆ ರೆಡಿ ಮಾಡಿರ್ತಾಳೆ".

## ವಸುಮತಿ ಉಡುಪ

ಹೊಸನಗರ ತಾಲ್ಲೂಕಿನ ನಗರ ಹುಟ್ಟೂರು. ತೀರ್ಥಹಳ್ಳಿಯಲ್ಲಿ ಪದವಿಪೂರ್ವ ಶಿಕ್ಷಣ. ಮೈಸೂರಿನಲ್ಲಿ ವಾಸ. 'ಪರಿವರ್ತನೆ', 'ಸಂಬಂಧಗಳು', 'ಅನವರತ', 'ಅವ್ಯಕ್ತ', 'ಮನ್ವಂತರ' ಸೇರಿದಂತೆ 11 ಕಾದಂಬರಿಗಳನ್ನು, 'ಬಂದನಾ ಹುಲಿರಾಯನು', 'ವಿಕಲ್ಪ', 'ಶೇಷ ಪ್ರಶ್ನೆ' ಸೇರಿದಂತೆ 21 ಕಥಾಸಂಕಲನಗಳನ್ನು ಪ್ರಕಟಿಸಿದ್ದಾರೆ. 'ಕಥಾವಸಂತ' ಅವರ ಸಮಗ್ರ ಕಥಾಸಂಕಲನ. ಐದು ಪ್ರಬಂಧ ಸಂಕಲನಗಳು ಪ್ರಕಟವಾಗಿವೆ.